# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2019-20 ನೇ ಸಾಲಿನಿಂದ ಬೆಳೆಯ ಸಮೀಕ್ಷೆಯನ್ನು ಸಿಆಸು-ಆಸು(ಇ-ಆಡಳಿತ) ಇಲಾಖೆಯು ಅಭಿವೃದ್ದಿ ಪಡಿಸಿರುವ ಮೊಬೈಲ್ ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:**

1. ಕಂದಾಯ ಇಲಾಖೆಯ ಅಧಿಸೂಚನೆಯ ಸಂಖ್ಯೆ: ಕಂಇ 23 ಇಎಲ್ಆರ್ 2004, ದಿನಾಂಕ: 06.05.2005.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಇಆಇ 2018; ದಿನಾಂಕ: 27.08.2018
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಇಆಇ 2018; ದಿನಾಂಕ: 25.10.2018
4. ದಿನಾಂಕ: 20-05-2019 ರಂದು ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯ ಸಭೆ ನಡವಳಿಗಳು.
5. ಕೃಷಿ ಆಯುಕ್ತರ ಏಕ ಕಡತ ಸಂಖ್ಯೆ:ಜಕೃನಿ(ಬೆ.ವಿ)/ಬೆಳೆ ಸಮೀಕ್ಷೆ/17/2019-20.

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ:1 ರಲ್ಲಿ ಓದಲಾದ ಅಧಿಸೂಚನೆ ಅನ್ವಯ ಬೆಳೆ ವಿಸ್ತೀರ್ಣದ ಅಂದಾಜು ಅಂಕಿ ಅಂಶಗಳ ಕ್ರೋಢೀಕರಣ ಕಾರ್ಯವನ್ನು ಗ್ರಾಮಲೆಕ್ಕಿಗ, ಕೃಷಿ ಸಹಾಯಕ ಮತ್ತು ಜಲಸಂಪನ್ಮೂಲ ಇಲಾಖೆಯ ಕಾರ್ಯತನಿಖಾಧಿಕಾರಿ – ಈ ಮೂವರನ್ನು ಒಳಗೊಂಡ ತಂಡವು ನಿರ್ವಹಿಸಬೇಕಾಗಿರುತ್ತದೆ. ಈ ತಂಡವು ಪ್ರತಿ ಗ್ರಾಮದ ಸರ್ವೆ / ಹಿಸ್ಸಾ ನಂಬರ್ ವಾರು ಭೂಬಳಕೆ, ಬೆಳೆ ವಿಸ್ತೀರ್ಣ ಹಾಗೂ ಜಮೀನಿನ ಸರ್ವೆ ಸಂಖ್ಯೆಗೆ ಅನುಗುಣವಾಗಿ ನೀರಾವರಿ ಬೆಳೆ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 2 ಮತ್ತು 3 ರ ಸರ್ಕಾರದ ಆದೇಶದನ್ವಯ ಬೆಳೆ ಸಮೀಕ್ಷೆ ಯೋಜನೆಯನ್ನು 2018 ನೇ ಮುಂಗಾರು ಸಾಲಿನಲ್ಲಿ ಸಿಆಸುಇ (ಇ-ಆಡಳಿತ) ಅಭಿವೃದ್ಧಿಪಡಿಸಿದ ಮೊಬೈಲ್ ತಂತ್ರಾಂಶ ಬಳಸಿ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ ಸೇವೆಯನ್ನು (ಖಾಸಗಿ ನಿವಾಸಿ) ಮತ್ತು ಕೆಲವು ಆಯ್ದ ಇಲಾಖಾ ಸಿಬ್ಬಂದಿಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ 4 ರಲ್ಲಿ ಓದಲಾದ ಸಭೆಯಲ್ಲಿ ಬೆಳೆ ಸಮೀಕ್ಷೆ ಯೋಜನೆಯ ಅನುಷ್ಠಾನಕ್ಕೆ ಕೃಷಿ ಇಲಾಖೆಯನ್ನು ನೋಡಲ್ ಇಲಾಖೆಯನ್ನಾಗಿ ಮತ್ತು ಖಾಸಗಿ ನಿವಾಸಿಗಳನ್ನು ಬಳಸಿಕೊಂಡು ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ವಿವೇಚನೆಗೆ ಒಳಪಟ್ಟು ಇಲಾಖಾ ಸಿಬ್ಬಂದಿಗಳನ್ನು ಬಳಸಿಕೊಂಡು ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು 2019-20 ನೇ ಸಾಲಿನ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಮೇಲೆ ಕ್ರಮ ಸಂಖ್ಯೆ- 5 ರಲ್ಲಿ ಓದಲಾದ ಏಕ ಕಡತದಲ್ಲಿ ಕೃಷಿ ಆಯುಕ್ತರು ಬೆಳೆ ಸಮೀಕ್ಷೆ ಚಟುವಟಿಕೆ ಕಾರ್ಯವನ್ನು 2019-20 ನೇ ಸಾಲಿನ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಸಿಆಸು-ಆಸು (ಇ-ಆಡಳಿತ) ಇಲಾಖೆಯ "ಬೆಳೆ ಸಮೀಕ್ಷೆ ಮೊಬೈಲ್ ಆಪ್" ಬಳಸಿ ಆಯಾ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳಿವಳಿಕೆ ಇರುವ ಯುವಕರ ಸೇವೆಯನ್ನು (ಇನ್ನು ಮುಂದೆ ಖಾಸಗಿ ನಿವಾಸಿ ಎಂದು ಹಿಂದಿನ ವರ್ಷದಂತೆ ಕರೆಯಲಾಗುವುದು) ಬಳಸಿಕೊಂಡು ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ವಿವೇಚನೆಗೆ ಒಳಪಟ್ಟು ಇಲಾಖಾ ಸಿಬ್ಬಂದಿಯನ್ನು ಬೆಳೆ ಸಮೀಕ್ಷೆ ಕಾರ್ಯಕ್ಕೆ ಬಳಸಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸುತ್ತಾ, ಬೆಳೆ ಸಮೀಕ್ಷೆ ಕಾರ್ಯಕ್ರಮವನ್ನು ಮುಂದುವರೆದ ಯೋಜನೆಯೆಂದು ಪರಿಗಣಿಸಿ ಪ್ರತಿ ಸಾಲಿನಲ್ಲಿ (ನಾಲ್ಕೂ ಹಂಗಾಮುಗಳಲ್ಲಿ) ಮೊಬೈಲ್ ಆಪ್ ಮೂಲಕ ಅಥವಾ ಮುಂಬರುವ ದಿನಗಳಲ್ಲಿ ಇತರೆ ಯಾವುದಾದರೂ ನವೀನ ತಂತ್ರಜ್ಞಾನದಿಂದ ಕೈಗೊಳ್ಳಲು ಅನುಮತಿಸುವಂತೆ ಕೋರಿರುತ್ತಾರೆ.

ಮೊಬೈಲ್ ತಂತ್ರಾಂಶದ ಮೂಲಕ ಬೆಳೆ ಸಮೀಕ್ಷೆ ಕೈಗೊಂಡಲ್ಲಿ ಕನಿಷ್ಠ ಬೆಂಬಲ ಬೆಲೆ, ಕೃಷಿ ಮತ್ತು ತೋಟಗಾರಿಕೆಯ ಹಲವಾರು ಫಲಾನುಭವಿ ಯೋಜನೆಗಳು, ಬೆಳೆ ವಿಮೆ ಮುಂತಾದ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸಲು ಸಹಾಯಕವಾಗಿರುತ್ತದೆ. ಬೆಳೆ ವಿಮೆಯಲ್ಲಿ ಅಬದ್ಧ ಹಾಗು ಅನರ್ಹ ನೋಂದಣಿಯನ್ನು ತಡೆದು, ಸರ್ಕಾರದ ಹಣವನ್ನು ಉಳಿಸಬಹುದಾಗಿರುತ್ತದೆ. ಸರ್ವೆ / ಹಿಸ್ಸಾ ನಂಬರ್ ವಾರು ಬೆಳೆ ಮಾಹಿತಿಯನ್ನು ನಿಖರವಾಗಿ ಸಂಗ್ರಹಿಸಲು ಹೊಸ ವ್ಯವಸ್ಥೆಯನ್ನು ಜಾರಿಗೊಳಿಸುವ ಅವಶ್ಯಕತೆಯಿರುತ್ತದೆ ಎಂಬ ಅಂಶಗಳನ್ನು ಪರಿಗಣಿಸಿ ಸಚಿವ ಸಂಪುಟದ ಅನುಮೋದನೆಯೊಂದಿಗೆ ಕೆಳಕಂಡಂತೆ ಸರ್ಕಾರವು ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 34 ಕೃಕೈಉ 2019, ಬೆಂಗಳೂರು, ದಿ:05-07-2019.**

2019-20 ನೇ ಸಾಲಿನಲ್ಲಿ – ಬೆಳೆ ಸಮೀಕ್ಷೆ ಯೋಜನೆಯನ್ನು ಜಿಲ್ಲಾಧಿಕಾರಿಗಳ ನೇರ ಉಸ್ತುವಾರಿಯಲ್ಲಿ ಸಿಆಸು-ಆಸು (ಇ-ಆಡಳಿತ) ಇಲಾಖೆಯ "ಬೆಳೆ ಸಮೀಕ್ಷೆ ಮೊಬೈಲ್ ಆಪ್" ಬಳಸಿ ಆಯಾ ಗ್ರಾಮದಲ್ಲಿ

ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ ಸೇವೆಯನ್ನು (ಖಾಸಗಿ ನಿವಾಸಿ) ಮತ್ತು ಇಲಾಖಾ ಸಿಬ್ಬಂದಿಗಳನ್ನು ಬಳಸಿಕೊಂಡು ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆ ಸಮೀಕ್ಷೆ ಕಾರ್ಯವನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮತಿಯನ್ನು ನೀಡಿ ಆದೇಶಿಸಿದೆ.

2. ಬೆಳೆ ಸಮೀಕ್ಷೆ (ಪ್ರತಿ ತಾಕಿನ ಬೆಳೆ ಸಂಗ್ರಹಣೆಗೆ) ಕೈಗೊಳ್ಳುವ ಸಮೀಕ್ಷಕರಿಗೆ ಕೆಳಕಂಡಂತೆ ಗೌರವ ಧನ ಪಾವತಿಸಲು ಸಹ ಅನುಮೋದನೆ ನೀಡಿದೆ.

I. ಕೃಷಿಯೇತರ ಉದ್ದೇಶ /ಬೆಳೆ ಕಟಾವಾದ/ಬೀಳು ಭೂಮಿಯೆಂದು ದಾಖಲಿಸಿದ ಜಮೀನಿಗೆ ರೂ.10/-

II. ಏಕ ಬೆಳೆ ಹೊಂದಿದ ಜಮೀನಿಗೆ ರೂ.10/-

III. ಬಹು ಬೆಳೆ ಹೊಂದಿದ ಜಮೀನಿಗೆ, ಪ್ರತಿ ಹೆಚ್ಚುವರಿ ಬೆಳೆ ದಾಖಲೆಗೆ ರೂ.2/- ರಂತೆ ಮತ್ತು ರೂ.5/- ರ ಮೇಲ್ಮಿತಿಗೊಳಪಟ್ಟು ಪ್ರತಿ ಬಹು ಬೆಳೆ ತಾಕುಗಳಿಗೆ ರೂ.15/- ಮೀರದಂತೆ ಪಾವತಿಸುವುದು.

3. ಸರ್ಕಾರಿ ಸಿಬ್ಬಂದಿಗಳು ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಂಡಲ್ಲಿ ಒಂದು ದಿನದಲ್ಲಿ 50 ಕ್ಕೂ ಹೆಚ್ಚಿನ ತಾಕುಗಳನ್ನು ಬೆಳೆ ಸಮೀಕ್ಷೆ ಮಾಡುವ ಇಲಾಖೆಗಳ ಸರ್ಕಾರಿ ಸಿಬ್ಬಂದಿಗಳಿಗೆ 50 ಕ್ಕು ಮೇಲ್ಪಟ್ಟ ತಾಕುಗಳಿಗೆ ಮಾತ್ರ ಮೇಲಿನ ಕಂಡಿಕೆಯಂತೆ ಗೌರವಧನವನ್ನು ನೀಡಲಾಗುವುದು.

4. 2019ರ ಬೆಳೆ ಸಮೀಕ್ಷೆ ಕಾರ್ಯ ಕೈಗೊಳ್ಳುವ ಮುನ್ನ ಎಲ್ಲಾ ತೋಟಗಾರಿಕಾ/ ರೇಷ್ಮೆ ವಾರ್ಷಿಕ ಬೆಳೆಗಳನ್ನು ಸಂಬಂಧಪಟ್ಟ ಇಲಾಖಾ ಸಿಬ್ಬಂದಿಗಳಿಂದ 2017 ಮತ್ತು 2018 ನೇ ಸಾಲಿನಲ್ಲಿ ಸಂಗ್ರಹಿಸಿದ ಬಹುವಾರ್ಷಿಕ ಬೆಳೆಗಳ ರೈತರ ತಾಕುಗಳನ್ನು ಪರಿಶೀಲಿಸಿ ದೃಢೀಕರಿಸುವುದು.. ತೋಟಗಾರಿಕೆ ಮತ್ತು ರೇಷ್ಮೆ ಇಲಾಖಾ ಸಿಬ್ಬಂದಿಗಳಿಗೆ ಪ್ರತಿ ಸರ್ವೆಗೆ ರೂ.10 ರ ಗೌರವಧನ ಪಾವತಿಸುವುದು. ತೋಟಗಾರಿಕೆ ಮತ್ತು ರೇಷ್ಮೆ ಬಹು ವಾರ್ಷಿಕ ಬೆಳೆಗಳ ಮಾಹಿತಿಯನ್ನು ಪರಿಶೀಲಿಸಿ ದೃಡೀಕರಿಸುವುದು ಆಯಾ ಇಲಾಖೆಗಳ ಮುಖ್ಯಸ್ಥರ ಜವಾಬ್ದಾರಿಯಾಗಿದೆ.

5. ಮುಂದುವರೆದು, ಬೆಳೆ ಸಮೀಕ್ಷೆ ಯೋಜನೆಯನ್ನು ಒಟ್ಟು ರೂ.90.00 ಕೋಟಿಗಳ (ತೊಂಬತ್ತು ಕೋಟಿ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಸದರಿ ವೆಚ್ಚವನ್ನು PMFBY ಯೋಜನೆಯಡಿ ಲೆಕ್ಕ ಶೀರ್ಷಿಕೆ 2401-00-110-0-07 ರಡಿ ಒದಗಿಸಲಾದ ಒಟ್ಟು ರೂ.845 ಕೋಟಿಗಳ ಅನುದಾನದ ಪೈಕಿ ರೂ.65.00 ಕೋಟಿಗಳನ್ನು (ಅರವತ್ತೈದು ಕೋಟಿ ರೂಪಾಯಿಗಳು

ಮಾತ್ರ) ಕೃಷಿ ಇಲಾಖೆಯಿಂದ ಹಾಗು ಸಿಆಸು (ಇ-ಆಡಳಿತ) ಇಲಾಖೆಯ ಅನುದಾನದಿಂದ ರೂ.25.00 ಕೋಟಿಗಳನ್ನು (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಭರಿಸಲು ಅನುಮತಿಯನ್ನು ನೀಡಿದೆ. ಸದರಿ ಸಮೀಕ್ಷಾ ವೆಚ್ಚದ ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

6. ಬೆಳೆ ಸಮೀಕ್ಷೆ ಕಾರ್ಯ ವಿಧಾನಗಳ ವಿವರಗಳನ್ನು **ಅನುಬಂಧ-2 ರಲ್ಲಿ ನೀಡಲಾಗಿದೆ.**

7. ವಿವಿಧ ಇಲಾಖೆಗಳ, ಸಂಸ್ಥೆಗಳ ಮತ್ತು ರಾಜ್ಯ ಸರ್ಕಾರದ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು **ಅನುಬಂಧ-3 ರಲ್ಲಿ** ನೀಡಿದೆ.

8. ಬೆಳೆಸಮೀಕ್ಷೆ ಯೋಜನೆಯಡಿ ಸಂಗ್ರಹವಾಗುವ ಮಾಹಿತಿಯನ್ನು ಈ ಕೆಳಕಂಡ ಚಟುವಟಿಕೆಗಳಿಗೆ ಸಹ ಬಳಸಲು ಅನುಮತಿಸಿದೆ.

I. ಸಾಂಖ್ಯಿಕ ಇಲಾಖೆ, ಕೃಷಿ, ರೇಷ್ಮೆ ಮತ್ತು ತೋಟಗಾರಿಕೆಗಳ ಬೆಳೆ ವಿಸ್ತೀರ್ಣ ಎಣಿಕಾ ಕಾರ್ಯದಲ್ಲಿ.

II. NSSO ಮತ್ತು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಬೆಳೆ ಕಟಾವು ಪ್ರಯೋಗಗಳನ್ನು ತಾಕಿನ/ಸರ್ವೆ ನಂಬರ್ ಆಯ್ಕೆಗೆ ಸಾಧ್ಯವಾಗುವಂತಹ ಸಂದರ್ಭದಲ್ಲಿ ಬಳಸುವುದು.

III. NDRF/SDRF ರಲ್ಲಿ ಸಹಾಯಧನ ನೀಡಲು.

a ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬೆಳೆ ಹಾನಿ ಕುರಿತ ಸಮೀಕ್ಷಾ ವರದಿ ತಯಾರಿಸುವ ಸಂಧರ್ಭದಲ್ಲಿ

b ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಸುವ ಸಂಧರ್ಭದಲ್ಲಿ

IV. ಬೆಳೆ ವಿಮೆ ಯೋಜನೆಯಡಿ ರೈತರ ತಾಕುವಾರು ಬೆಳೆ ಪರಿಶೀಲಿಸಲು

V. ಕನಿಷ್ಠ ಬೆಂಬಲ ಬೆಲೆ ಯೋಜನೆಯ ಅನುಷ್ಠಾನದಲ್ಲಿ

VI. ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳ ಫಲಾನುಭವಿ ಯೋಜನೆಗಳ ಅನುಷ್ಠಾನ.

VII. ಆರ್‌ಟಿಸಿ ಯಲ್ಲಿ ಬೆಳೆ ಮಾಹಿತಿ ನಮೂದಿಸಲು.

9. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಇಜಿಎಂ 2018; ದಿನಾಂಕ: 30.08.2018 ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಮತ್ತು ಇ-ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಸಹ-ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಯನ್ನು

ರಚಿಸಲಾಗಿರುತ್ತದೆ. ಸದರಿ ಸಮಿತಿಯು ಕಾಲಕಾಲಕ್ಕೆ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿ, ಸಂಗ್ರಹಿಸಿದ ಬೆಳೆ ಮಾಹಿತಿಯನ್ನು ಮೇಲೆ ಅನುಮೋದಿಸಿದ ಉದ್ದೇಶಗಳಲ್ಲದೆ ಬೇರೆ ಯಾವ ಯಾವ ಉದ್ದೇಶಕ್ಕೆ ಬಳಸಬೇಕು ಎಂಬುದರ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಅದೇ ರೀತಿ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆರವರ ಅಧ್ಯಕ್ಷತೆಯಲ್ಲಿ ಹಾಗೂ ತೋಟಗಾರಿಕೆ, ರೇಷ್ಮೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇತ್ಯಾದಿ ಇಲಾಖೆ ಸದಸ್ಯರುಗಳನ್ನು ಒಳಗೊಂಡ ರಾಜ್ಯ ಮಟ್ಟದ ಉಪ ಸಮಿತಿಯನ್ನು ರಚಿಸಲಾಗುವುದು. ಸದರಿ ಉಪ ಸಮಿತಿಯು ಕಾಲಕಾಲಕ್ಕೆ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸುತ್ತದೆ ಹಾಗೂ ರಾಜ್ಯ ಮಟ್ಟದ ಸಮಿತಿಗೆ ಅವಶ್ಯ ಮಾಹಿತಿಯನ್ನು ಒದಗಿಸುತ್ತದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

BS Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).

05/07/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ.
8. ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
10. ನಿರ್ದೇಶಕರು ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
12. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
13. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಎಲ್ಲಾ ಜಿಲ್ಲಾಧಿಕಾರಿಗಳು.
15. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
16. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
17. ಎಲ್ಲಾ ಜಿಲ್ಲಾ ಉಪ ತೋಟಗಾರಿಕಾ ನಿರ್ದೇಶಕರು
18. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
19. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.

20. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
22. ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 14 ರಿಂದ 16 ರವರೆಗೆ ಕೃಷಿ ನಿರ್ದೇಶಕರ ಮೂಲಕ
ಕ್ರಮ ಸಂಖ್ಯೆ: 17, ನಿರ್ದೇಶಕರು ತೋಟಗಾರಿಕೆ ಇಲಾಖೆರವರ ಮೂಲಕ ಹಾಗೂ
ಕ್ರಮ ಸಂಖ್ಯೆ: 18, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ರವರ ಮೂಲಕ)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮುಖ್ಯಮಂತ್ರಿರವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು. (ಸಚಿವ ಸಂಪುಟ ಪ್ರಕರಣ ಸಂಖ್ಯೆ:373/2019)
4. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.

## ಅನುಬಂಧ-1

1. ಬೆಳೆ ಸಮೀಕ್ಷಕರಿಗೆ (ಖಾಸಗಿ ನಿವಾಸಿಗಳು ಮತ್ತು ಇಲಾಖಾ ಸಿಬ್ಬಂದಿಗಳು) ನೀಡುವ ಗೌರವ ಧನಕ್ಕೆ ರೂ. 87 ಕೋಟಿಗಳು.

2. ಬೆಳೆ ಸಮೀಕ್ಷೆ ಕಾರ್ಯಕ್ಕಾಗಿ ಜಿಲ್ಲಾಡಳಿತವು ಬಳಸಿಕೊಳ್ಳುವ 227*4 ಮಾಸ್ಟರ್ ತರಬೇತುದಾರರ ಸೇವೆಗೆ ಪ್ರತಿ ಮಾಸ್ಟರ್ ತರಬೇತುದಾರರಿಗೆ ಪ್ರತಿ ವರ್ಷಕ್ಕೆ ರೂ.2000/- ಗಳಂತೆ ಹಾಗು 30*6 ಸಲಹೆಗಾರರಿಗೆ, ಪ್ರತಿ ಸಲಹೆಗಾರರಿಗೆ ಪ್ರತಿ ವರ್ಷಕ್ಕೆ ರೂ.3000/- ಗಳಂತೆ ರೂ.23.00 ಲಕ್ಷಗಳು.

3. ಹೆಲ್ಪ್ ಡೆಸ್ಕ್, ತರಬೇತಿ ಮತ್ತು ಇತರೆ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ.2.77 ಕೋಟಿ.

BS Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).

05/07/19

## ಅನುಬಂಧ-2

## ಬೆಳೆ ಸಮೀಕ್ಷೆ ಕಾರ್ಯ ವಿಧಾನಗಳು

I. ಬೆಳೆ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯು ಜಿಲ್ಲಾಧಿಕಾರಿಗಳ ಅಧೀನದಲ್ಲಿರುವ ಜಿಲ್ಲಾಡಳಿತದ್ದಾಗಿರುತ್ತದೆ.

II. ಜಿಲ್ಲಾಡಳಿತವು ಕ್ಷೇತ್ರ ಸಿಬ್ಬಂದಿಗಳಿಗೆ ಗ್ರಾಮಗಳ ಹಂಚಿಕೆಮಾಡುವುದು (ಗ್ರಾಮ ಲೆಕ್ಕಿಗರು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೃಷಿ ಅಧಿಕಾರಿ, ತೋಟಗಾರಿಕೆ ಅಧಿಕಾರಿ, ರೇಷ್ಮೆ ಇಲಾಖೆ ಅಧಿಕಾರಿ ಮುಂತಾದವರು)

III. ಸದರಿ ಅಧಿಕಾರಿಗಳು, ಆಯಾ ಗ್ರಾಮದ ಬೆಳೆ ಸಮೀಕ್ಷಕರ ಮೂಲಕ ಮಾಹಿತಿಯ ಸಂಗ್ರಹಣೆಗೆ ಜವಾಬ್ದಾರರಾಗಿರುತ್ತಾರೆ.

IV. ಸದರಿ ಅಧಿಕಾರಿಗಳು ಒಬ್ಬರು ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳನ್ನ ದತ್ತಾಂಶ ಸಂಗ್ರಹಣೆಗಾಗಿ ಪ್ರತಿ ಗ್ರಾಮದಲ್ಲೂ ಗುರುತಿಸಬಹುದಾಗಿದೆ. ಜಿಲ್ಲಾಡಳಿತವು ಗ್ರಾಮ ಮಟ್ಟದಲ್ಲಿ ಲಭ್ಯವಿರುವ ಖಾಸಗಿ ನಿವಾಸಿಗಳನ್ನು ನೇರವಾಗಿ ಗುರುತಿಸಬಹುದಾಗಿದೆ.

   i. ಖಾಸಗಿ ಸಂಪನ್ಮೂಲಗಳ ಜೊತೆಗೆ, ಅವಶ್ಯವಿದ್ದಲ್ಲಿ, ಗ್ರಾಮ ಸಹಾಯಕರು ಹಾಗೂ ಅಗ್ರೀ ಟೆಕ್ನೋ ಪ್ರಮೋಟರ್ಸ್‌ಗಳ ಸೇವೆಯನ್ನು ಸಹ ದತ್ತಾಂಶ ಸಂಗ್ರಹಣೆಗಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಇವರುಗಳನ್ನು ಸಹ ಖಾಸಗಿ ನಿವಾಸಿಗಳೆಂದು ಪರಿಗಣಿಸಲಾಗುತ್ತದೆ.

   ii. ಜಿಲ್ಲಾಧಿಕಾರಿಗಳು ಇಲಾಖಾ ಸಿಬ್ಬಂದಿಗಳನ್ನು ಸಹ ಬೆಳೆ ಸಮೀಕ್ಷಕರನ್ನಾಗಿ ನೇಮಿಸಬಹುದಾಗಿರುತ್ತದೆ

V. ಒಬ್ಬ ಸರ್ಕಾರಿ ಸಿಬ್ಬಂದಿಯ ಅಧೀನದಲ್ಲಿ ಪ್ರತಿ ಗ್ರಾಮಕ್ಕೆ ಒಂದು ಅಥವಾ ಹೆಚ್ಚಿನ ಖಾಸಗಿ ನಿವಾಸಿಗಳನ್ನು ಬೆಳೆ ಸಮೀಕ್ಷೆ ಚಟುವಟಿಕೆಗಾಗಿ ನಿಯೋಜಿಸಲಾಗುವುದು.

   i. ಪ್ರತಿ ತಹಶೀಲ್ದಾರರಿಗೆ ಒಂದು ಲಾಗೀನ್ ಐಡಿಯನ್ನು ನೀಡಲಾಗುವುದು. ಪ್ರತಿ ಗ್ರಾಮಕ್ಕೆ ನೀಡಲಾದ ಸರ್ಕಾರಿ ಸಿಬ್ಬಂದಿ ಮತ್ತು ಖಾಸಗಿ ನಿವಾಸಿಗಳನ್ನು ಈ ಲಾಗೀನ್ ಐ.ಡಿ ಮೂಲಕ ಮ್ಯಾಪ್ ಮಾಡಬಹುದಾಗಿರುತ್ತದೆ.

   ii. ನೋಂದಾಯಿಸಿಕೊಳ್ಳಲಾದ ಖಾಸಗಿ ನಿವಾಸಿಗಳ ಆಧಾರ್ ಮಾಹಿತಿಯನ್ನು ಸಂಗ್ರಹಿಸಿ ದೃಢೀಕರಿಸಲಾಗುವುದು. ಈ ರೀತಿ ನೋಂದಾಯಿಸಿಕೊಂಡಿರುವ ಖಾಸಗಿ ನಿವಾಸಿಗಳಿಗೆ ಆಧಾರ್ ಮೂಲಕ ನೇರವಾಗಿ ಬೆಳೆ ಸಮೀಕ್ಷೆಯ ಗೌರವಧನವನ್ನು ಬಿಡುಗಡೆ ಮಾಡಲಾಗುವುದು.

V. ಖಾಸಗಿ ನಿವಾಸಿಗಳು ಸರ್ಕಾರಿ ಸಿಬ್ಬಂದಿಯ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಬೇಕಾಗುವುದು. ಸರ್ಕಾರಿ ಸಿಬ್ಬಂದಿಗೆ ಒಂದು ಲಾಗೀನ್ ಐ.ಡಿಯನ್ನು ನೀಡಲಾಗುವುದು. ಇದರ ಮೂಲಕ ತಮಗೆ ಹಂಚಿಕೆಯಾಗಿರುವ ಖಾಸಗಿ ನಿವಾಸಿಗಳ ಕಾರ್ಯಪ್ರಗತಿಯನ್ನು ಅವರು ವೀಕ್ಷಿಸಬಹುದು ಮತ್ತು ಅವರು ದಾಖಲಿಸುವ ಬೆಳೆಯನ್ನು ದೃಢೀಕರಿಸಬಹುದಾಗಿರುತ್ತದೆ.

VI. ಖಾಸಗಿ ನಿವಾಸಿಗಳು ಸರ್ಕಾರವು ನಿಗಧಿಪಡಿಸಿರುವ ಅವಧಿಯಲ್ಲಿಯೇ ಬೆಳೆ ಸಮೀಕ್ಷೆ ತಂತ್ರಾಂಶವನ್ನು ಬಳಸಿ ಬೆಳೆ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಜಿಲ್ಲಾಡಳಿತದ್ದಾಗಿರುತ್ತದೆ.

VII. 2017-18 ಮತ್ತು 2018-19 ನೇ ಸಾಲಿನಲ್ಲಿ ಮೊಬೈಲ್ ತಂತ್ರಾಂಶದ ತರಬೇತಿಗಾಗಿ ನುರಿತ ತರಬೇತಿದಾರರನ್ನು (Master trainer) ಗುರುತಿಸಲಾಗಿದ್ದು, ಅವುಗಳಗೆ ಮತ್ತೊಮ್ಮೆ ಮೊಬೈಲ್ ಆಪ್ ಬಳಕೆ ಕುರಿತು ತರಬೇತಿಯನ್ನು ಕೃಷಿ ಇಲಾಖಾ ವತಿಯಿಂದ ನೀಡಲಾಗುವುದು. ನುರಿತ ತರಬೇತಿದಾರರು (Master Trainers) ಖಾಸಗಿ ನಿವಾಸಿಗಳಿಗೆ ತರಬೇತಿಯನ್ನು ನೀಡುವಲ್ಲಿ ಜಿಲ್ಲಾಡಳಿತಕ್ಕ ಸಹಾಯವನ್ನು ಮಾಡುತ್ತಾರೆ.

IX ಗುರುತಿಸಲಾಗಿರುವ ಎಲ್ಲಾ ಖಾಸಗಿ ನಿವಾಸಿಗಳಿಗೆ ಕೃಷಿ ಇಲಾಖೆಯು ಒಂದು ಬಾರಿಯ ತರಬೇತಿಯನ್ನು SATCOM ಮೂಲಕ ಆಯೋಜಿಸುವುದು.

X ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ : ಆರ್ ಡಿ 23 ಇಎಲ್ಆರ್ 2004 ದಿ:06.05.2005 ರನ್ವಯ MIS ವರದಿಗಳನ್ನು ರಚಿಸುವುದು ಮತ್ತು ಸದರಿ ಅಧಿಸೂಚನೆಯನ್ವಯ ಅಸ್ತಿತ್ವಕ್ಕೆ ತರಲಾಗಿರುವ ಸಮಿತಿಯು ವಾರಕ್ಕೊಮ್ಮೆ ದತ್ತಾಂಶ ಸಂಗ್ರಹಣೆಯನ್ನು ಪರಿಶೀಲಿಸಿ, ಅಂತಿಮವಾಗಿ ದತ್ತಾಂಶವನ್ನು ಅನುಮೋದಿಸತಕ್ಕದ್ದು.

XI. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಮೇಲು ಸಹಿ ಮಾಡಬೇಕಾಗಿರುವುದರಿಂದ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲುಕು ಮಟ್ಟದಲ್ಲಿ ಸಂಗ್ರಹಿಸಲಾಗುವ ಮಾಹಿತಿಯಲ್ಲಿ ಶೇ.1 ರಷ್ಟು ಸಂಗ್ರಹಿಸಿದ ಮಾಹಿತಿಯನ್ನು 3rd ಪಾರ್ಟಿ ಆಡಿಟ್ ಗೆ ಒಳಪಡಿಸ ತಕ್ಕದ್ದು.

XII. ಕೃಷಿ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಯಡಿ ಸಂಗ್ರಹಿಸಲಾದ ಅಂಕಿ ಅಂಶಗಳನ್ನು ಮೇಲ್ವಿಚಾರಣೆ ಮಾಡಲು ತಾಲ್ಲೂಕು ಮಟ್ಟದ ಒಬ್ಬ ಅಧಿಕಾರಿಯನ್ನು QA ಅಧಿಕಾರಿಯನ್ನಾಗಿ ನೇಮಿಸುವುದು.

XIII. ಸದರಿ ಅಧಿಕಾರಿಯ ಜವಾಬ್ದಾರಿಯು ಕ್ಷೇತ್ರ ಮಟ್ಟದಲ್ಲಿ ದೊರಕುವ ಮಾಹಿತಿಯ ಗುಣಮಟ್ಟವನ್ನು ಆಗಿಂದ್ದಾಗ್ಗೆ ಪರಿಶೀಲಿಸಿ ಅವಶ್ಯಕತೆ ಇದ್ದಲ್ಲಿ ಮರು ಸಮೀಕ್ಷೆಗೆ ಒಳಪಡಿಸತಕ್ಕದ್ದು.

XIV. ಸದರಿ ಅಧಿಕಾರಿಯು ಗುಣಮಟ್ಟದ ಮಾಹಿತಿಯನ್ನು ಸಂಗ್ರಹಿಸಲು ಹಾಗೂ ಮಾಹಿತಿಯನ್ನು ಅನುಮೋದಿಸುವ ಸೂಪರ್‌ವೈಸರ್‌ನ್ನು ಮೇಲುಸ್ತುವಾರಿ ಮಾಡುವ ಜವಾಬ್ದಾರಿಯನ್ನು ಹೊಂದುವುದು.

XV. ಕೃಷಿ ಇಲಾಖೆಯು ಬೆಳೆ ಸಮೀಕ್ಷೆಯ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ. ಕೃಷಿ ಇಲಾಖೆಯು ಸದರಿ ಯೋಜನೆಯ ಅನುಷ್ಠಾನವನ್ನು ಆಯಾ ಜಿಲ್ಲಾಧಿಕಾರಿಗಳ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸಿ.ಆ.ಸು.(ಇ–ಆಡಳಿತ) ಇಲಾಖೆಗಳ ಉಸ್ತುವಾರಿಯೊಂದಿಗೆ ಕೈಗೊಳ್ಳಬೇಕಾಗಿರುತ್ತದೆ. ಪ್ರತಿ ದಿನ ಖಾಸಗಿ ನಿವಾಸಿಗಳ ಹಾಗೂ ಬೆಳೆ ಸಮೀಕ್ಷೆ ಕಾರ್ಯದ ಮೇಲ್ವಿಚಾರಣೆಯನ್ನು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರುಗಳು ಜಿಲ್ಲಾ ಮಟ್ಟದಲ್ಲಿ ಹಾಗೂ ಆಯುಕ್ತರು ಕೃಷಿ ಇಲಾಖೆರವರು ರಾಜ್ಯ ಮಟ್ಟದಲ್ಲಿ ನಿರ್ವಹಿಸಬೇಕಾಗಿರುತ್ತದೆ.

BS Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).
05/07/19

## ಅನುಬಂಧ-3

## ಬೆಳೆ ಸಮೀಕ್ಷೆ ಯೋಜನೆಯಲ್ಲಿ ಭಾಗಿಯಾಗುವ ವಿವಿಧ ಭಾಗೀದಾರ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳ ವಿವರಗಳು

## Roles and Responsibility of various entities

1. **Role of the State level nodal department i.e. Agriculture Department**

    a. **Crop Data Collection, Verification & Approval**

    I. Identification of funding.
    II. Testing of changes in Crop Survey Software (if any) and providing the UAT.
    III. Training to PRs.
    IV. Training to Master Trainers.
    V. Regular interaction with field level.
    VI. Co-Ordination with e-Governance for software enhancement or changes.
    VII. System study, Change requirement.
    VIII. Issuing of clarifications in the form of letters, Circular and GOs (both technical & administrative).
    IX. Co-ordination with District Administration in appointment of PRs.
    X. Monitoring the progress of Crop Survey.
    XI. Interacting with PRs and resolving their issues.
    XII. Helpdesk setup.
    XIII. Co-Ordination with Taluk, District level committee for acceptance of data.
    XIV. Interaction and ensuring the involvement of domain departments (Agriculture/ Horticulture/ Sericulture).
    XV. Appointment of Third Party Agency and analysis of third party data.
    XVI. Placing subjects as and when they arise before the SLMC and getting the issues approved/ resolved.
    XVII. To ensure that all the departments at District level get involved in the data collection and verification work.
    XVIII. Co-Ordination with DES in final acceptance of the Crop Data.
    XIX. Ensure appointment of QA officers at Taluk level.
    XX. Periodic review with QA officers in knowing the quality of data which is coming in and to take corrective action.
    XXI. Payment to PRs.

XXII. Certifying the satisfactory performance of the software as when request by e-Governance.

XXIII. Providing crop data to various needy departments.

b. **Crop Data usage**

I. Communication and Co-Ordination with user departments like Revenue, Food, Agriculture, Horticulture, Sericulture, Agriculture Marketing, etc.

II. Understanding their requirement.

III. Testing and UAT of software provided by e-Governance to Nodal Department for in turn providing to various user departments.

IV. Providing the data to departments as per there requirement.

V. Co-Ordination with e-Governance for software enhancement or changes and data related issues.

2. **Role of the State Level Monitoring Committee (SLMC)**
   a. Monitoring the progress of Crop Survey.
   b. Issue of directions to various entities on implementation of Crop Survey scheme within the stipulated time.
   c. To decide the usage of the Crop Survey data by the Government.
   d. To provide decision on the issues raised by the nodal department during the implementation.
   e. To conduct weekly meeting during the data collection and at least once in a month during the data usage.

3. **Role of District Administration**
   a. The DC will be the implementing authority at the district level.
   b. Ensuring involvement of all the Agriculture and allied departments in the data collection activity.
   c. To allocate village to Government officials of Revenue, Agriculture, Horticulture & Irrigation Departments for supervision.
   d. Identification of one or more private residents for each of the village allocated to him for carrying the crop survey activity.
   e. Training to private residents through master trainers at taluk level.
   f. Publicity and advertisement of the crop survey activity.
   g. Verifying crop data entered by the private residents under him by comparing the photo and the crop name entered and approve the same.

h. Monitoring the progress and certifying the data which would then be used all the departments.
i. Review of data on weekly basis though the district level and taluk level committees constituted vide RD notification dated: 6th May 2005 and take corrective measures wherever required.
j. Creating the team of officials as per the RD notification for approving the village level and hobli level data.

4. **Role of e-Governance**
   a. Hardware Infrastructure at SDC.
   b. Software Development and management for al functionalities of Crop Survey and Crop Survey Data usage.
   c. Training to the key resources of Nodal Department.
   d. Resolving the software related issues raised by the Nodal Department by Co-Ordinate with development team.

5. **Directorate of Economics & Statistics**
   a. Giving suggestion regarding any extra field to be captured in the mobile app.
   b. Periodically monitor the data at central level
   c. The Agriculture Department at the State level will drive the project, DES should also actively get involved and ensure that the committees constituted at District, Taluk and Hobli level as per notification RD 23 ELR 2004 Dated:6th May 2005 sign off the data. The notification of Revenue Department would be modified and it would be clearly mentioned that only the data collected though Crop Survey project would be considered for Crop Enumeration and all other Government purposes.
   d. Since DES has to sign the data it was decided that the third party audit of 1% maybe done by DSO/representative of DES available at the District/taluk level.
   e. The Agriculture Department at the State level will drive the project, DES should also actively get involved and ensure that the committees constituted at District, Taluk and Hobli level as per notification RD 23 ELR 2004 Dated:6th May 2005 sign off the data. The notification of Revenue Department would be modified and it would be clearly mentioned that only the data collected though Crop Survey project would be considered for Crop Enumeration and all other Government purposes.

6. **Revenue Department, Agriculture, Horticulture, Sericulture & Irrigation Department**

   a. To issue directions to all their field level officers to monitor the crop survey activity by assisting the district administration.
   b. Agriculture Department will be the nodal department and drive the project at State level for the current year and it will be examined if it be handed over to DES from the next financial year. The DES would continue to reconcile the data and get approval of Taluk, District and State level committee and will sign off the final data.
   c. Deputy Commissioner will be overall in charge of the project at the District level, the daily monitoring of PRs and project will be done by the joint Director of Agriculture at the district level and Commissioner, Agriculture at State level.
   d. A sub-committee of State Level Monitoring Committee would be constituted under the chairmanship of Commissioner, Agriculture with members from Horticulture, Sericulture, DES, etc.

7. **Tahsildars**

   a. Allocation of village(s) to Government officers of Revenue, Agriculture, Horticulture & Irrigation Departments.
   b. Identification of private residents for each of the village for carrying the crop survey activity.
   c. Allocation of Private Residents to a village allocated under the Government officials.
   d. Training to Private Residents through master trainers.
   e. Monitoring the progress.
   f. Review of data on weekly basis though the taluk level committee constituted vide RD notification dated: 06th May 2005 and take corrective measures wherever required.
   g. Creating the team of officials as per the RD notification for approving the village level and hobli level data.

8. **Taluk level QA Officer**

   a. One taluk level officer will be appointed as QA Officer for Agriculture, Sericulture & Horticulture Department
   b. The Officer will concurrently monitor the data.

c. The Role of taluk level QA officer is to periodically check the quality of the data coming from the field and inform the Supervisor to send for re survey wherever it is required.
d. He shall be responsible for getting good quality data and also supervise the Supervisor accepting the data

**9. Government Officials in-charge of village**

a. Identification of one or more Private Residents for each of the village allocated to him for carrying the crop survey activity.
b. Verifying crop data entered by the Private Residents under him by comparing the photo and the crop name entered and approve the same.
c. Monitoring the progress and certifying the data which would then be used all the departments.

B S Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ).

05/07/19